ಪ್ರಜಾವಾಣಿ

# ಕ್ರಿಕೆಟ್: ಫೈನಲ್ ಪ್ರವೇಶಿಸಿದ ಪ್ರೆಸಿಡೆನ್ಸಿ, ಜೈನ್ ಕಾಲೇಜ್

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಪ್ರೆಸಿಡೆನ್ಸಿ ಕಾಲೇಜು ಮತ್ತು ವಿವಿ ಪುರಂನ ಎಸ್‌ಬಿಎಂ ಜೈನ್ ಕಾಲೇಜು ತಂಡಗಳು ಹೆರಾನ್ಸ್ ಕ್ರಿಕೆಟ್ ಕ್ಲಬ್ ಆಶ್ರಯದ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದವು.

ಜವಾಹರ್ ಅಶೋಕ್ ಮೈದಾನದಲ್ಲಿ ಸೋಮವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಎಸ್‌ಬಿಎಂ ಜೈನ್ ಕಾಲೇಜು ತಂಡ ಜೆ.ಸಿ. ರಸ್ತೆಯ ಎಸ್‌ಬಿಎಂ ಜೈನ್ ಕಾಲೇಜು ವಿರುದ್ಧ 35 ರನ್‌ಗಳ ಗೆಲುವು ಪಡೆಯಿತು. ಮತ್ತೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಪ್ರೆಸಿಡೆನ್ಸಿ ಕಾಲೇಜು ತಂಡ 17 ರನ್‌ಗಳಿಂದ ಸುರಾನಾ ಕಾಲೇಜು ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರ್: ಎಸ್‌ಬಿಎಂ ಜೈನ್ ಕಾಲೇಜು, ವಿವಿ ಪುರಂ: 30 ಓವರ್‌ಗಳಲ್ಲಿ 5 ವಿಕೆಟ್‌ಗೆ 215 (ಸಚಿನ್ 53, ಮಧುಸೂಧನ್ 49, ಎಸ್.ಪಿ. ಅರ್ಜುನ್ 33, ರೋಹಿತ್ ಗೌಡ 23, ಅಕ್ಷಯ್ 22ಕ್ಕೆ 3) ಎಸ್‌ಬಿಎಂ ಜೈನ್ ಕಾಲೇಜು, ಜೆ.ಸಿ. ರಸ್ತೆ: 30 ಓವರ್‌ಗಳಲ್ಲಿ 180 (ಅಮಿತ್ 44, ಸಾತ್ವಿಕ್ 52, ಆದಿತ್ಯ 30ಕ್ಕೆ 2, ವಿಶ್ವನಾಥ್ 36ಕ್ಕೆ 2)

ಪ್ರೆಸಿಡೆನ್ಸಿ ಕಾಲೇಜು: 30 ಓವರ್‌ಗಳಲ್ಲಿ 8 ವಿಕೆಟ್‌ಗೆ 167 (ರಕ್ಷಿತ್ 45, ಸುಜಿತ್ ಗೌಡ 35, ಟಿ. ಪ್ರದೀಪ್ 36ಕ್ಕೆ 2, ಕುನಾಲ್ 22ಕ್ಕೆ 2) ಸುರಾನಾ ಕಾಲೇಜು: 28 ಓವರ್‌ಗಳಲ್ಲಿ 151 (ಸುಹಾಸ್ 46, ಮಿಥುನ್ 37, ರಕ್ಷಿತ್ 19ಕ್ಕೆ 4, ತಿಲಕ್ 20ಕ್ಕೆ 2)